ಕರ್ನಾಟಕ ಸರ್ಕಾರ

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, (ಇತರೆ ಪರೀಕ್ಷೆಗಳು) ಮಲ್ಲೇಶ್ವರಂ, ಬೆಂಗಳೂರು-03**

E-Mail:adpisvsection@gmail.com ದೂರವಾಣಿ:080-23360109

ಸಂಖ್ಯೆ: ವಿ1/ವಿಸಪ/ಅ.ಸೂ/16/2021 ದಿನಾಂಕ:18/10/2021

**ಅಧಿಸೂಚನೆ**

**ವಿಷಯ:** 2021ರ ನವೆಂಬರ್ ಮಾಹೆಯಲ್ಲಿ ನಡೆಯಲಿರುವ ವಿಶೇಷ ಸಂಗೀತ,ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಇಡಿ30 ಎಸ್.ಎಲ್.ಬಿ.2011 ದಿ: 01-10-2012.
2. ಸರ್ಕಾರಿ ಆದೇಶ ಸಂಖ್ಯೆ: ಇಡಿ32 ಎಸ್.ಎಲ್.ಬಿ. 2013 ದಿ: 25-03-2013.
3. ಸರ್ಕಾರಿ ಆದೇಶ ಸಂಖ್ಯೆ: ಇಡಿ 299 ಎಸ್.ಎಲ್.ಬಿ 2011 ದಿ:08-07-2013.
4. ಸರ್ಕಾರದ ಆದೇಶ ಸಂಖ್ಯೆ: ಇಡಿ 299 ಎಸ್.ಎಲ್.ಬಿ 2011(ಭಾಗ), ದಿ:07-05-2015.

******

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ವತಿಯಿಂದ 2021ರ ನವೆಂಬರ್ ಮಾಹೆಯಲ್ಲಿ ನಡೆಯಲಿರುವ ವಿಶೇಷ ಸಂಗೀತ (ಕರ್ನಾಟಕ/ಹಿಂದೂಸ್ಥಾನಿ), ಭರತನಾಟ್ಯ, ಕೂಚಿಪುಡಿ, ಕಥಕ್ ಮತ್ತು ತಾಳವಾದ್ಯ (ಕರ್ನಾಟಕ/ಹಿಂದೂಸ್ಥಾನಿ) ಪರೀಕ್ಷೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಪರೀಕ್ಷೆಗೆ ಹಾಜರಾಗಲು ಅರ್ಹ ಅಭ್ಯರ್ಥಿಗಳು ತಮ್ಮ ವಿವರಗಳನ್ನು ಮಂಡಳಿಯ ಜಾಲತಾಣ www.sslc.karnataka.gov.in ನಲ್ಲಿ ನೋಂದಣಿ ಮಾಡಿಕೊಳ್ಳಲು ಸೂಚಿಸಿದೆ.

**ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆ ತೆಗೆದುಕೊಳ್ಳಲು ಅಗತ್ಯವಿರುವ ಅರ್ಹತೆ**

- ಪಠ್ಯಕ್ರಮದಂತೆ ಕಿರಿಯ ದರ್ಜೆ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ದಿನಾಂಕ:01-03-2021ಕ್ಕೆ 10 ವರ್ಷ ತುಂಬಿರಬೇಕು.
- ಹಿರಿಯ ದರ್ಜೆಗೆ ಅರ್ಜಿ ಸಲ್ಲಿಸಲು ಕಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ ಮೂರು ವರ್ಷ ಆಗಿರಬೇಕು ಅಥವಾ ಸರ್ಕಾರದ ಆದೇಶ ಸಂಖ್ಯೆ:ಇಡಿ 195 ಡಿಜಿಓ 2004 ಬೆಂಗಳೂರು ದಿನಾಂಕ:15-01-2005ರಂತೆ ದಿನಾಂಕ: 1-03-2021ಕ್ಕೆ ಸರಿಯಾಗಿ 17 ವರ್ಷ ತುಂಬಿದ್ದು, ಅಭ್ಯರ್ಥಿಯು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ವ್ಯಾಸಂಗ ಮಾಡಿ ಪದವಿಪೂರ್ವ (ಪಿ.ಯು.ಸಿ) ಶಿಕ್ಷಣ ಇಲಾಖೆ ನಡೆಸುವ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ ನೇರವಾಗಿ ಹಿರಿಯ ದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ. **ನೇರವಾಗಿ ಅರ್ಜಿ ಸಲ್ಲಿಸುವ ಇಂತಹ ಅಭ್ಯರ್ಥಿಗಳು ಮಂಡಳಿಯನ್ನು ಸಂಪರ್ಕಿಸಿ ಅನುಮತಿ ಪಡೆದು ನಂತರ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು.** ಹಾಗೂ ಯಾವುದೇ ಹಿರಿಯ ದರ್ಜೆಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕಿರಿಯ ದರ್ಜೆಯ ಪರೀಕ್ಷಾ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಅರ್ಜಿ ಸಲ್ಲಿಸಬೇಕು.

18/10/2021

- ನೇರವಾಗಿ ಹಿರಿಯ ದರ್ಜೆಗೆ ಅರ್ಜಿ ಸಲ್ಲಿಸಲು ದಿನಾಂಕ:1-03-2021ಕ್ಕೆ 18 ವರ್ಷ ವಯಸ್ಸು ಮೇಲ್ಪಟ್ಟಿದ್ದರೆ ಅಂತಹ ಅಭ್ಯರ್ಥಿಗಳು ತಮ್ಮ ಗುರುಗಳಿಂದ ಪಠ್ಯಕ್ರಮ ಪೂರ್ಣಗೊಂಡಿರುವುದರ ಬಗ್ಗೆ ಪ್ರಮಾಣಪತ್ರ ಪಡೆದು ಅರ್ಜಿ ಸಲ್ಲಿಸಬಹುದು. ನೇರವಾಗಿ ಅರ್ಜಿ ಸಲ್ಲಿಸುವ ಇಂತಹ ಅಭ್ಯರ್ಥಿಗಳು ಮಂಡಳಿಯನ್ನು ಸಂಪರ್ಕಿಸಿ ಅನುಮತಿ ಪಡೆದು ನಂತರ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು.

- ವಿದ್ವತ್‌ಪೂರ್ವ ದರ್ಜೆಗೆ ಅರ್ಜಿ ಸಲ್ಲಿಸಲು ಹಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 3 ವರ್ಷಗಳಾಗಿರಬೇಕು ಅಥವಾ ದಿನಾಂಕ:01-03-2021ಕ್ಕೆ 19ವರ್ಷ ಪೂರ್ಣಗೊಂಡಿರುವ ಅಭ್ಯರ್ಥಿಗಳು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ತೆಗೆದುಕೊಂಡು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೆ ಅಂತಹ ವಿದ್ಯಾರ್ಥಿಗಳು ವಿದ್ವತ್‌ಪೂರ್ವ ಪರೀಕ್ಷೆಯನ್ನು ನೇರವಾಗಿ ತೆಗೆದುಕೊಳ್ಳಬಹುದು. **ನೇರವಾಗಿ ಅರ್ಜಿ ಸಲ್ಲಿಸುವ ಇಂತಹ ಅಭ್ಯರ್ಥಿಗಳು ಮಂಡಳಿಯನ್ನು ಸಂಪರ್ಕಿಸಿ ಅನುಮತಿ ಪಡೆದು ನಂತರ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು.**

- ಯಾವುದೇ ಹಿರಿಯ ದರ್ಜೆಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕಿರಿಯ ದರ್ಜೆಯ ಪರೀಕ್ಷಾ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಅರ್ಜಿ ಸಲ್ಲಿಸಬೇಕು.

- ವಿದ್ವತ್‌ಪೂರ್ವ ಪರೀಕ್ಷೆ ಉತ್ತೀರ್ಣರಾದ ಒಂದು ವರ್ಷದ ನಂತರ ವಿದ್ವತ್‌ಅಂತಿಮ ಪರೀಕ್ಷೆ ತೆಗೆದುಕೊಳ್ಳಬಹುದು.

- ಒಬ್ಬ ಅಭ್ಯರ್ಥಿಯು ಯಾವುದೇ ಒಂದು ದರ್ಜೆಯ (ಗ್ರೇಡ್) ಹಾಡುಗಾರಿಕೆ ಜೊತೆಯಲ್ಲಿ ವಾದ್ಯ ಸಂಗೀತ ಪರೀಕ್ಷೆಗಳಿಗೆ ಒಂದು ಬಾರಿಗೆ ಕುಳಿತುಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಆದರೆ ಸದರಿ ಪರೀಕ್ಷೆಗಳಿಗೆ ಪ್ರತ್ಯೇಕ ಅರ್ಜಿಯನ್ನು ಪರೀಕ್ಷಾ ಶುಲ್ಕದೊಡನೆ ಕಟ್ಟಿರಬೇಕು.

- ಯಾವುದೇ ಕಾರಣದಿಂದಲೂ ಒಬ್ಬ ಅಭ್ಯರ್ಥಿ ಬೇರೆ ಬೇರೆ ದರ್ಜೆಯ (ಗ್ರೇಡ್) ಹಾಡುಗಾರಿಕೆ ಹಾಗೂ ವಾದ್ಯಸಂಗೀತ ಪರೀಕ್ಷೆಗಳಿಗೆ ಒಂದೇ ವರ್ಷದಲ್ಲಿ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಅಂತೆಯೇ ಹಾಡುಗಾರಿಕೆ ಅಥವಾ ವಾದ್ಯ ಸಂಗೀತದ ಪರೀಕ್ಷೆಯೊಂದಿಗೆ ತಾಳವಾದ್ಯ ಮತ್ತು ನೃತ್ಯದ ಪರೀಕ್ಷೆಗಳಿಗೆ ಜೊತೆಯಲ್ಲಿಯೇ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ.

## ಅಭ್ಯರ್ಥಿಗಳು ಪರೀಕ್ಷಾ ನೋಂದಣಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ

1. ಅಭ್ಯರ್ಥಿಗಳು ಪರೀಕ್ಷಾ ನೋಂದಣಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮಂಡಳಿಯ ಜಾಲತಾಣ www.sslc.karnataka.gov.in ದಲ್ಲಿ ಅವಕಾಶ ಕಲ್ಪಿಸಲಾಗಿದೆ.
2. ಅಭ್ಯರ್ಥಿಗಳು ತಮ್ಮ ವಿವರಗಳನ್ನು ಆನ್‌ಲೈನ್ ಮೂಲಕ ಯಾವುದೇ ತಪ್ಪುಗಳು ಇಲ್ಲದೆ ನಮೂದಿಸುವುದು.
3. **ಅಭ್ಯರ್ಥಿಯು ತಾನು ಅಭ್ಯಾಸ ಮಾಡುತ್ತಿರುವ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಶಿಕ್ಷಕರ ಮೌಲ್ಯಮಾಪಕರ ನೋಂದಣಿ ಸಂಖ್ಯೆಯನ್ನು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ನಮೂದಿಸುವುದು. ಒಂದು ವೇಳೆ ಸದರಿ ಶಿಕ್ಷಕರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ಮೌಲ್ಯಮಾಪಕರ ನೋಂದಣಿ ಮಾಡಿಕೊಂಡ ನಂತರ ಆನ್‌ಲೈನ್‌ನಲ್ಲಿ ಜನರೇಟ್ ಆಗುವ ಮೌಲ್ಯಮಾಪಕರ ನೋಂದಣಿ ಸಂಖ್ಯೆಯನ್ನು ಅಭ್ಯರ್ಥಿಗಳು ನಮೂದಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಆನ್‌ಲೈನ್ ಅರ್ಜಿ ಸಿಂಧು ಆಗುವುದಿಲ್ಲ.**

18/10/2021

4. ವಯಸ್ಸಿನ ಬಗ್ಗೆ ದೃಢೀಕರಣಕ್ಕಾಗಿ ಜನನ ಪ್ರಮಾಣ ಪತ್ರದ ಪ್ರತಿ/ಎಸ್.ಎಸ್.ಎಲ್.ಸಿ ಅಂಕಪಟ್ಟಿ/ಶಾಲಾ ಮುಖ್ಯಸ್ಥರಿಂದ ಪಡೆದ ದಾಖಲಾತಿ ವಹಿಯ ಉದ್ಧೃತ ಭಾಗವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಿದ ಮೂಲ ಪ್ರತಿ/ವರ್ಗಾವಣೆ ಪತ್ರ ದೃಢೀಕರಿಸಿದ ಜೆರಾಕ್ಸ್ ಪ್ರತಿ/ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.
5. ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದ ವಿನಾಯಿತಿ ಇದೆ. ಪರೀಕ್ಷಾ ಶುಲ್ಕದಿಂದ ವಿನಾಯತಿ ಪಡೆಯಲು ಈ ವರ್ಗದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಜಾತಿ ಪ್ರಮಾಣಪತ್ರದ ಆರ್.ಡಿ ನಂಬರನ್ನು ಆನ್‌ಲೈನ್‌ನಲ್ಲಿ ದಾಖಲಿಸಬೇಕು. ಹಾಗೂ ಸಂಬಂಧಪಟ್ಟ ದಾಖಲೆಯನ್ನು ಅಪ್‌ಲೋಡ್ ಮಾಡುವುದು.
6. ಅಂಧ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ನೀಡಲಾಗುತ್ತದೆ. ಇಂತಹ ಅಭ್ಯರ್ಥಿಗಳು ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಮೂಲ ಪ್ರಮಾಣಪತ್ರವನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಹಾಗೂ ಅಂಧ ಅಭ್ಯರ್ಥಿಗಳ ಪ್ರಮಾಣಪತ್ರ (upto 1MB Size, PDF Format), ಇತರೆ ಪ್ರಮಾಣಪತ್ರಗಳು (upto 1 MB Size, PDF Format) ನಲ್ಲಿ ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಬೇಕು.
7. **ಪರೀಕ್ಷಾ ಅರ್ಜಿಗಳಲ್ಲಿ ಅಭ್ಯರ್ಥಿಗಳ ಭಾವಚಿತ್ರವು 60 ರಿಂದ 80 KB ಹಾಗೂ ಸಹಿಯು 20 ರಿಂದ 50 KB ಗಾತ್ರದಲ್ಲಿದ್ದು, JPEG ನಮೂನೆಯಲ್ಲಿರಬೇಕು.**
8. **ಭಾವಚಿತ್ರ ನೇರ ಭಂಗಿಯಲ್ಲಿರಬೇಕು ಹಾಗೂ ಭಾವಚಿತ್ರವನ್ನು ಮಾತ್ರವೇ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು. ಭಾವಚಿತ್ರ ಅಂಟಿಸಿರುವ ಇಡೀ ಪೇಪರ್ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವಂತಿಲ್ಲ.**

## ಆನ್‌ಲೈನ್ ಮೂಲಕ ಶುಲ್ಕ ಪಾವತಿಸುವ ವಿಧಾನ

1. ಪರೀಕ್ಷಾ ಶುಲ್ಕವನ್ನು **ಆನ್‌ಲೈನ್** ಮೂಲಕ ಪಾವತಿಸಲು ಅವಕಾಶ ಕಲ್ಪಿಸಿದ್ದು, Debit Card/Credit Card/Net Banking ಮೂಲಕ ಶುಲ್ಕ ಪಾವತಿಸಬೇಕಾಗಿರುತ್ತದೆ.
2. ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸುವ ವಿಧಾನವನ್ನು ಹೊರತುಪಡಿಸಿ ಮತ್ತ್ಯಾವುದೇ ಚಲನ್/ಡಿ.ಡಿ./ ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

## ಅಭ್ಯರ್ಥಿಗಳು ಅರ್ಜಿಗಳನ್ನು ಪರೀಕ್ಷಾ ಕೇಂದ್ರಗಳಿಂದ ಪರಿಶೀಲಿಸಿ ಅನುಮೋದಿಸಿಕೊಳ್ಳುವ ವಿಧಾನ

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಿದ ನಂತರ ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಿಗೆ ಕೆಳಕಂಡ ದಾಖಲೆಗಳನ್ನು ಸಲ್ಲಿಸಿ ಅರ್ಜಿಗಳನ್ನು ಅನುಮೋದಿಸಿಕೊಳ್ಳುವುದು.

- ಅಭ್ಯರ್ಥಿಯ ಆನ್‌ಲೈನ್ ಪರೀಕ್ಷಾ ಅರ್ಜಿಯ ಮುದ್ರಿತ ಪ್ರತಿ.
- ಆನ್‌ಲೈನ್ ಮೂಲಕ ಶುಲ್ಕ ಪಾವತಿಸಿದ ಮುದ್ರಿತ ಪ್ರತಿ.
- ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಅಪ್‌ಲೋಡ್ ಮಾಡಲಾದ ಜನ್ಮದಿನಾಂಕಕ್ಕೆ ಸಂಬಂಧಿಸಿದ ದಾಖಲೆ.

18/10/2021

* ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಪಡೆದಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರ (ಆರ್.ಡಿ ಸಂಖ್ಯೆ).
* ಅಂಧ ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಪಡೆದಿದ್ದಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.

**ವಿವಿಧ ಪರೀಕ್ಷೆಗಳಿಗೆ ಕೆಳಕಂಡ ವಾದ್ಯಗಳನ್ನು ಮಾತ್ರ ನಿಗಧಿಪಡಿಸಿದೆ.**

| | |
|---|---|
| ಅ) ಕರ್ನಾಟಕ ವಾದ್ಯಸಂಗೀತ | ವೀಣೆ/ಪಿಟೀಲು/ಕೊಳಲು/ನಾದಸ್ವರ/ಗೋಟುವಾದ್ಯ/ಕ್ಲರಿಯೋನೇಟ್/ ಮ್ಯಾಂಡಲಿನ್/ಸ್ಯಾಕ್ಸ್‌ಫೋನ್ |
| ಆ) ಹಿಂದೂಸ್ತಾನಿ ವಾದ್ಯಸಂಗೀತ | ಪಿಟೀಲು/ಕೊಳಲು/ಬೀನ್/ಸಿತಾರ್/ಷಹನಾಯ್/ದಿಲ್‌ರುಬಾ/ ಹಾರ್ಮೋನಿಯಂ/ಮೋಹನ್ ವೀಣಾ/ರುದ್ರವೀಣಾ/ಸಂತೂರ್/ ಸರೋದ್/ಸಾರಂಗಿ |
| ಇ) ಕರ್ನಾಟಕ ತಾಳವಾದ್ಯ | ಮೃದಂಗ/ಖಂಜಿರ/ಘಟಂ/ಮೋರ್ಚಿಂಗ್/ಡೋಲ್/ಡೋಲಕ್ |
| ಈ) ಹಿಂದೂಸ್ತಾನಿ ತಾಳವಾದ್ಯ | ತಬಲ/ಪಕ್ವಾಜ್/ಡೋಲಕ್ |

**ಪರೀಕ್ಷಾ ವಿಷಯ ಮತ್ತು ಶುಲ್ಕದ ವಿವರ**

| ಕ್ರಮ ಸಂಖ್ಯೆ | ಪರೀಕ್ಷೆಯ ಹೆಸರು | ಪರೀಕ್ಷಾ ಶುಲ್ಕದ ವಿವರ | | ಒಟ್ಟು |
|---|---|---|---|---|
| | | ಪರೀಕ್ಷಾ ಶುಲ್ಕ ರೂ. | ಅಂಕಪಟ್ಟಿ ಲ್ಯಾಮಿನೇಷನ್ ಶುಲ್ಕ ರೂ. | |
| 1 | ಕಿರಿಯ ದರ್ಜೆ (Junior) | 1364–00 | 45–00 | 1409 |
| 2 | ಹಿರಿಯ ದರ್ಜೆ (Senior) | 1520–00 | 45–00 | 1565 |
| 3 | ವಿದ್ವತ್‌ಪೂರ್ವ(Pre Vidwat) | 1675–00 | 45–00 | 1720 |
| 4 | ವಿದ್ವತ್‌ಅಂತಿಮ (Vidwat Final) | 1754–00 | 45–00 | 1799 |

* **ಎಸ್.ಸಿ/ಎಸ್.ಟಿ. ಮತ್ತು ಅಂಧ ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ರೂ.10/–, ಅಂಕಪಟ್ಟಿ ಲ್ಯಾಮಿನೇಷನ್ ಶುಲ್ಕ ರೂ.25/–, ಅಂಕಪಟ್ಟಿ ಶುಲ್ಕ ರೂ. 20/– ಅರ್ಜಿ ಶುಲ್ಕ–ರೂ.100/–ಗಳು ಒಟ್ಟು ರೂ.155/– ಗಳನ್ನು ಪಾವತಿಸಬೇಕಾಗಿರುತ್ತದೆ.**

18/10/2021

## ಅನುತ್ತೀರ್ಣರಾದ ಅಭ್ಯರ್ಥಿಗಳ ಶುಲ್ಕದ ವಿವರ

| ಕ್ರಮ ಸಂಖ್ಯೆ | ಪರೀಕ್ಷೆಯ ಹೆಸರು | ಲಿಖಿತ–1 (ಥಿಯರಿ–1) | ಲಿಖಿತ–2 (ಥಿಯರಿ–2) | ಶ್ರವಣ/ ದೃಶ್ಯಜ್ಞಾನ | ಎಲ್ಲಾ ಪ್ರಾಯೋಗಿಕ ವಿಷಯಗಳು ಸೇರಿದಂತೆ |
|---|---|---|---|---|---|
| 1 | ಕಿರಿಯ ದರ್ಜೆ (Junior) | 300 | – | 244 | 720 |
| 2 | ಹಿರಿಯ ದರ್ಜೆ (Senior) | 320 | 320 | – | 780 |
| 3 | ವಿದ್ವತ್‌ಪೂರ್ವ(Pre Vidwat) | 368 | 368 | – | 840 |
| 4 | ವಿದ್ವತ್‌ಅಂತಿಮ (Vidwat Final) | 377 | 377 | – | 900 |

- ಅನುತ್ತೀರ್ಣರಾದ ಎಸ್.ಸಿ/ಎಸ್.ಟಿ. ಮತ್ತು ಅಂಧ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕ ರೂ.10/–, ಅಂಕಪಟ್ಟಿ ಶುಲ್ಕ ರೂ.20/– ಮತ್ತು ಅಂಕಪಟ್ಟಿ ಲ್ಯಾಮಿನೇಷನ್ ಶುಲ್ಕ ರೂ. 25/– ಒಟ್ಟು ರೂ.55/– ಪಾವತಿಸಬೇಕಾಗಿರುತ್ತದೆ.
- ಒಬ್ಬ ಅಭ್ಯರ್ಥಿ ಒಂದು ಥಿಯರಿ (ಲಿಖಿತ) ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದರೆ ಆ ಪತ್ರಿಕೆ ಮಾತ್ರ ಪರೀಕ್ಷೆ ತೆಗೆದುಕೊಳ್ಳಬೇಕು.
- ಅಭ್ಯರ್ಥಿ ಒಂದು ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದರೆ ಎಲ್ಲಾ ಪ್ರಾಯೋಗಿಕ ಪರೀಕ್ಷೆಗಳನ್ನು ತೆಗೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ.

## ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ನಿಗಧಿಗೊಳಿಸಿರುವ ದಿನಾಂಕಗಳ ವಿವರ

| ಕ್ರ.ಸಂ. | ವಿವರ | ದಿನಾಂಕ |
|---|---|---|
| **01** | ಅಧಿಸೂಚನೆ ಪ್ರಕಟಣೆ ದಿನಾಂಕ | 18/10/2021 |
| 02 | ಅಭ್ಯರ್ಥಿಗಳು ಮಂಡಳಿಯ ಜಾಲತಾಣದಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ದಿನಾಂಕ | 18/10/2021 ರಿಂದ 02/11/2021 ರವರೆಗೆ |
| 03 | ದಂಡ ಶುಲ್ಕದೊಂದಿಗೆ ದಿನ ಒಂದಕ್ಕೆ ರೂ.150/–ಗಳೊಂದಿಗೆ ಅರ್ಜಿಗಳನ್ನು ಸಲ್ಲಿಸುವ ದಿನಾಂಕ | 03/11/2021 ರಿಂದ 07/11/2021 ರವರೆಗೆ |
| 04 | ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಅಭ್ಯರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿ ಅನುಮೋದಿಸುವ ದಿನಾಂಕ | 18/10/2021 ರಿಂದ 09/11/2021 ರವರೆಗೆ |

- ಮೇಲೆ ನಿಗಧಿಪಡಿಸಿದ ಅಂತಿಮ ದಿನಾಂಕದ ನಂತರ ಅಭ್ಯರ್ಥಿಗಳು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

18/10/2021

- ಪರೀಕ್ಷಾ ಕೇಂದ್ರ ನಿಗಧಿಗೆ ಸಾಕಷ್ಟು ಅಭ್ಯರ್ಥಿಗಳು ದಾಖಲಾಗದಿದ್ದರೆ ಅಥವಾ ಇನ್ನಾವುದೇ ಕಾರಣಕ್ಕಾಗಲಿ ರಾಜ್ಯದ ಯಾವುದೇ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸುವ ಅಥವಾ ಹತ್ತಿರದ ಪರೀಕ್ಷಾ ಕೇಂದ್ರಕ್ಕೆ ವಿಲೀನಗೊಳಿಸುವ ಪೂರ್ಣ ಅಧಿಕಾರವನ್ನು ಮಂಡಳಿಯು ಹೊಂದಿರುತ್ತದೆ. ಅಭ್ಯರ್ಥಿಯು ಪರೀಕ್ಷಾ ಅರ್ಜಿ ಸಲ್ಲಿಸಿದ ನಂತರ ವಿಷಯ ಅಥವಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.
- ಶಾಸ್ತ್ರ ಹಾಗೂ ಪ್ರಾಯೋಗಿಕ ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ತಾಳ್ಮೆಯಿಂದಿದ್ದು, ಶಾಂತಿಯುತವಾದ ವಾತಾವರಣವನ್ನು ಕಾಪಾಡಲು ಪೋಷಕರಿಗೆ ತಿಳಿಸಲಾಗಿದೆ ಹಾಗೂ ಪರೀಕ್ಷೆಗಳು ಸುಗಮವಾಗಿ ಸಕಾಲಕ್ಕೆ ನಡೆಯಲು ಪರೀಕ್ಷಾ ಕೇಂದ್ರದ ಸಿಬ್ಬಂದಿಗೆ ಸಹಕಾರ ನೀಡುವುದು ಪೋಷಕರ ಜವಾಬ್ಧಾರಿಯಾಗಿರುತ್ತದೆ.
- ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ವಿಶೇಷ ವೇಷ ಭೂಷಣ, ಬಣ್ಣ ಇತ್ಯಾದಿಗಳನ್ನು ಧರಿಸುವುದನ್ನು ನಿಷೇಧಿಸಿದೆ. ಆದರೆ, ಅಭ್ಯಾಸ ಮಾಡಲು ಉಪಯೋಗಿಸುವ ಸಾಮಾನ್ಯ ಉಡುಪನ್ನು ಧರಿಸಲು ಅವಕಾಶ ಕಲ್ಪಿಸಿದೆ.
- ಪ್ರಾಯೋಗಿಕ ಪರೀಕ್ಷೆಯ ದಿನಾಂಕದಂದು ಸೂಚಿತ ಸಮಯಕ್ಕಿಂತ ಅರ್ಧ ಗಂಟೆ ಮೊದಲು ಹಾಜರಾಗುವುದನ್ನು ಕಡ್ಡಾಯಗೊಳಿಸಿದೆ.
- ಪ್ರಾಯೋಗಿಕ ಪರೀಕ್ಷೆಗೆ ವೇಳಾಪಟ್ಟಿಯನ್ನು ಅಭ್ಯರ್ಥಿಗಳ ಸಂಖ್ಯೆಗನುಗುಣವಾಗಿ ಮಂಡಳಿಯಿಂದಲೇ ನೀಡಲಾಗುವುದು. ಪ್ರಾಯೋಗಿಕ ಪರೀಕ್ಷೆಗೆ ಅಭ್ಯರ್ಥಿಗಳಿಗೆ ಗೊತ್ತುಪಡಿಸಿದ ದಿನಾಂಕದಂದೇ ಕಡ್ಡಾಯವಾಗಿ ಹಾಜರಾಗುವುದು. ಒಂದು ವೇಳೆ ಗೊತ್ತುಪಡಿಸಿದ ದಿನಾಂಕದಂದು ಅಭ್ಯರ್ಥಿ ಪ್ರಾಯೋಗಿಕ ಪರೀಕ್ಷೆಗೆ ಗೈರುಹಾಜರಾದಲ್ಲಿ ಅಂದೇ ಮಾರ್ಕ್‌ಪೋರ್ಟಿಂಗ್ ಪ್ರಕ್ರಿಯೆ ಮೂಲಕ ಗೈರುಹಾಜರಿ ಎಂದು ನಮೂದಿಸಲಾಗುವುದು. ಅಂತಹ ಅಭ್ಯರ್ಥಿಗಳು ಮುಂದಿನ ಸಾಲಿನಲ್ಲಿ ನಡೆಸಲಾಗುವ ಪರೀಕ್ಷೆಗೆ ನೋಂದಾಯಿಸಿ ಹಾಜರಾಗತಕ್ಕದ್ದು.

## <u>ಅಂಧ ಅಭ್ಯರ್ಥಿಗಳಿಗೆ ವಿಶೇಷ ಸೂಚನೆ</u>

ಪರೀಕ್ಷಾ ಅರ್ಜಿಯಲ್ಲಿ ಅಂಧ ಅಭ್ಯರ್ಥಿಗಳ ಮೀಸಲಾತಿ ಪ್ರಕರಣದಲ್ಲಿ ವಿನಾಯಿತಿ ಪಡೆದ ಅಭ್ಯರ್ಥಿಗಳು ಮಾತ್ರ ಲಿಖಿತ ಪರೀಕ್ಷೆ ಬರೆಯುವ ಸಹಾಯಕರ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಸಂಗೀತ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅಂಧ ಅಭ್ಯರ್ಥಿಗಳು ಪರೀಕ್ಷೆ ಬರೆಯುವ ಸಹಾಯಕರ ಸಂಪೂರ್ಣ ವಿವರವನ್ನು ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿಯೊಂದಿಗೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಸ್ವಯಂ ದೃಢೀಕರಣದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸಿದ 05 ದಿವಸದೊಳಗೆ ಪರೀಕ್ಷಾ ಕೇಂದ್ರಕ್ಕೆ ಕಳುಹಿಸುವುದು. ಅಂಧ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಬರೆಯುವ ಸಹಾಯಕರು ಸಂಗೀತ ಜ್ಞಾನವುಳ್ಳವರಾಗಿರಬಾರದು. ಕನಿಷ್ಠ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಪರೀಕ್ಷಾ ಸಹಾಯಕರಾಗಿ ಪರೀಕ್ಷೆ ಬರೆಯಲು ಒಪ್ಪಿಗೆ ಪತ್ರ ನೀಡಬೇಕು. ಅಲ್ಲದೆ ಸಹಾಯಕರ ಒಂದು ಪಾಸ್‌ಪೋರ್ಟ್ ಸೈಜ್ ಅಳತೆಯ ಭಾವಚಿತ್ರವನ್ನು ಒಪ್ಪಿಗೆಯ ಪತ್ರದೊಂದಿಗೆ ಲಗತ್ತಿಸಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿ ಪ್ರತಿ ಸಮೇತ ಎಲ್ಲಾ ವಿವರಗಳನ್ನು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಸಲ್ಲಿಸಬೇಕು. ಈ ಎಲ್ಲಾ ಮಾಹಿತಿಯ ಒಂದು ಪ್ರತಿಯನ್ನು ಪರೀಕ್ಷಾ ಕೇಂದ್ರದಲ್ಲಿ ಕಾಯ್ದಿರಿಸಿಕೊಳ್ಳುವುದು.

18/10/2021

## ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ ವಿಶೇಷ ಸೂಚನೆ

- ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಅಭ್ಯರ್ಥಿಗಳು ಸಲ್ಲಿಸುವ ದಾಖಲೆಗಳನ್ನು ಪರಿಶೀಲಿಸಿ ತಮ್ಮ ಲಾಗಿನ್‌ನಲ್ಲಿ ಅನುಮೋದಿಸುವುದು ಹಾಗೂ ಸಂಬಂಧಿಸಿದ ದಾಖಲೆಗಳನ್ನು ಪರೀಕ್ಷಾ ಕೇಂದ್ರದಲ್ಲಿಯೇ ಕಾಯ್ದಿರಿಸುವುದು. ಮಂಡಳಿ ಅಪೇಕ್ಷಿಸಿದ ಸಂದರ್ಭದಲ್ಲಿ ದಾಖಲೆಗಳನ್ನು ಒದಗಿಸುವುದು.
- ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಯಾವುದೇ ಕಾರಣದಿಂದಲೂ ಪ್ರವೇಶಪತ್ರ ಇಲ್ಲದ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡುವುದಾಗಲೀ ಅಥವಾ ಮಂಡಳಿಯ ಅನುಮತಿ ಇಲ್ಲದೆ ಪರೀಕ್ಷೆ ಬರೆಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.
- ಅಂಧ ಅಭ್ಯರ್ಥಿಗಳ ಸಹಾಯಕರಿಗ ಅನುಮತಿ ನೀಡುವುದು.
- ಪರೀಕ್ಷೆಗೆ ಸಂಬಂಧಿಸಿದ ಕೇಂದ್ರ ನಾಮಾಯಾದಿ ಪಟ್ಟಿ (ಸಿ.ಎನ್.ಆರ್), ಹಾಜರಾತಿ ಮತ್ತು ಅಂಕಗಳ ತ:ಖ್ತೆ (ಎ.ಎಂ.ಎಲ್), ನಾಮಾಯಾದಿ ಪಟ್ಟಿ (ಎನ್.ಆರ್) ಹಾಗೂ ಪರೀಕ್ಷಾ ನಿರ್ವಹಣೆಗೆ ಸಂಬಂಧಿಸಿದ ನಮೂನೆಗಳು/ತ:ಖ್ತೆಗಳನ್ನು ಡಯಟ್‌ಗಳಿಂದ ಪಡೆದು ಥಿಯರಿ ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ನಡೆಸುವುದು.
- ಪರೀಕ್ಷೆ ನಡೆಯುವ ದಿನದಂದು ಪರೀಕ್ಷೆ ಪ್ರಾರಂಭವಾದ ಅರ್ಧ ಗಂಟೆಯೊಳಗೆ ಅಭ್ಯರ್ಥಿಗಳ ಹಾಜರಾತಿ ಹಾಗೂ ಗೈರುಹಾಜರಾತಿ ಮಾಹಿತಿಯನ್ನು ಆನ್‌ಲೈನ್ ಮೂಲಕ ಪರೀಕ್ಷಾ ಕೇಂದ್ರಗಳಿಂದ ಅಪ್‌ಲೋಡ್ ಮಾಡುವುದು.

## ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಉಪನಿರ್ದೇಶಕರು (ಅಭಿವೃದ್ಧಿ) ರವರ ಜವಾಬ್ದಾರಿಗಳು

1. ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸುವ ಸಂಪೂರ್ಣ ಜವಾಬ್ದಾರಿ ಆಯಾ ಜಿಲ್ಲಾ ಡಯಟ್ ಉಪನಿರ್ದೇಶಕರು (ಅಭಿವೃದ್ಧಿ)ರವರದ್ದಾಗಿರುತ್ತದೆ.
2. ಪರೀಕ್ಷಾ ಕೇಂದ್ರಗಳು ಪರಿಶೀಲನೆ ಮಾಡಿ ಸಲ್ಲಿಸಿರುವ ಅರ್ಜಿಗಳನ್ನು ಕೇಂದ್ರವಾರು ಡಯಟ್ ಲಾಗಿನ್‌ನಲ್ಲಿ ಪರೀಕ್ಷಾ ಕೇಂದ್ರವಾರು ವೀಕ್ಷಿಸಲು ಅವಕಾಶ ಕಲ್ಪಿಸಿದೆ. ಅದರಂತೆ ಡಯಟ್ ಪ್ರಾಂಶುಪಾಲರು ಥಿಯರಿ ಹಾಗೂ ಪ್ರಾಯೋಗಿಕ ಪರೀಕ್ಷೆಗಳಿಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಕ್ರಮವಹಿಸುವುದು.
3. ಕೇಂದ್ರ ನಾಮಯಾದಿ ಪಟ್ಟಿ (ಸಿ.ಎನ್.ಆರ್) ಮತ್ತು ಹಾಜರಾತಿ ಮತ್ತು ಅಂಕಗಳ ತ:ಖ್ತೆ (ಎ.ಎಂ.ಎಲ್) ಹಾಗೂ ನಾಮಯಾದಿ ಪಟ್ಟಿ (ಎನ್.ಆರ್) ಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಡಯಟ್ ವ್ಯಾಪ್ತಿಗೆ ಬರುವ ಎಲ್ಲಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ವಿತರಿಸುವುದು.
4. ಪ್ರತಿ ಪರೀಕ್ಷಾ ಕೇಂದ್ರಗಳಿಗೆ ನೋಡಲ್ ಅಧಿಕಾರಿ, ಜಾಗೃತ ದಳ ಹಾಗೂ ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಕ್ರಮವಹಿಸುವುದು.
5. ಪರೀಕ್ಷೆ ನಡೆಯುವ ದಿನದಂದು ಮೂಲಕ ಪರೀಕ್ಷೆ ಪ್ರಾರಂಭವಾದ ಅರ್ಧ ಗಂಟೆಯೊಳಗೆ ಅಭ್ಯರ್ಥಿಗಳ ಹಾಜರಾತಿ ಹಾಗೂ ಗೈರುಹಾಜರಾತಿ ಮಾಹಿತಿಯನ್ನು ಆನ್‌ಲೈನ್ ಮೂಲಕ ಪರೀಕ್ಷಾ ಕೇಂದ್ರಗಳಿಂದ ಅಪ್‌ಲೋಡ್ ಮಾಡುವಂತೆ ಮೇಲುಸ್ತುವಾರಿ ವಹಿಸುವುದು.
6. ಪರೀಕ್ಷೆಯಲ್ಲಿ ತೊಡಗುವ ಜಿಲ್ಲಾ ಹಾಗೂ ತಾಲ್ಲೂಕು ಹಂತದ ಮುಖ್ಯ ಅಧೀಕ್ಷಕರು, ಪ್ರಶ್ನೆಪತ್ರಿಕೆ ಪಾಲಕರು, ಕೊಠಡಿ ಮೇಲ್ವಿಚಾರಕರು ಹಾಗೂ ಪ್ರಾಯೋಗಿಕ ಪರೀಕ್ಷೆಯ ಮೌಲ್ಯಮಾಪಕರು/ಸಂಪನ್ಮೂಲ ವ್ಯಕ್ತಿಗಳಿಗೆ ಅಧಿಸೂಚನೆಯಲ್ಲಿರುವ ಎಲ್ಲಾ ಮಾಹಿತಿಗಳನ್ನು ನೀಡುವ ಸಲುವಾಗಿ ಒಂದು ದಿನದ ಪರೀಕ್ಷಾ ಪೂರ್ವ ತರಬೇತಿಯನ್ನು ಆಯೋಜಿಸಿ ಪರೀಕ್ಷೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಕುರಿತು ಕೈಗೊಂಡ ಕ್ರಮಗಳ ಬಗ್ಗೆ ಕಡ್ಡಾಯವಾಗಿ ಮಂಡಳಿಗೆ ದಿನಾಂಕ:25/11/2021ರೊಳಗಾಗಿ ವರದಿ ನೀಡುವುದು.

18/10/2021

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯ ವಿವರವಾದ ಮಾಹಿತಿಯುಳ್ಳ FLOW CHART ಅನ್ನು ಮಂಡಳಿಯ ಜಾಲತಾಣ www.sslc.karnataka.gov.in ನಲ್ಲಿ ಲಭ್ಯಗೊಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ದೂರವಾಣಿ ಸಂಖ್ಯೆ: 080–23360109 ಕಛೇರಿಯ ಸಮಯದಲ್ಲಿ ಸಂಪರ್ಕಿಸುವುದು.

8/10/2021

(ಎಸ್. ಗೀತಾ)
ನಿರ್ದೇಶಕರು
ಇತರೆ ಪರೀಕ್ಷೆಗಳು

**ಇವರಿಗೆ,**

1. ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ಮೈಸೂರು/ಬೆಳಗಾಂ/ಕಲಬುರ್ಗಿ ವಿಭಾಗ ಸಹನಿರ್ದೇಶಕರ ಕಛೇರಿ, ರವರ ಮಾಹಿತಿಗಾಗಿ.
2. ಹಿರಿಯ ಸಹಾಯಕ ನಿರ್ದೇಶಕರು, ಸಂಗೀತ/ನೃತ್ಯ ವಿಭಾಗ, ಆಯುಕ್ತರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
3. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇವರಿಗೆ ಸೂಕ್ತ ಕ್ರಮಕ್ಕಾಗಿ,
4. ರಾಜ್ಯದ ಎಲ್ಲಾ ಸಂಗೀತ/ನೃತ್ಯ/ತಾಳವಾದ್ಯ ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮಕ್ಕಾಗಿ.
5. ಕಛೇರಿ ಪ್ರತಿ.

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಆಯುಕ್ತರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.